**ಅಕ್ಟೋಬರ್ 22, 2008**

**ಗವರ್ನರ್ ಡಾ॥ ಡಿ. ಸುಬ್ಬಾರಾವ್ ಅವರ ಸಹಿ ಇರುವ, ಎರಡೂ ಸಂಖ್ಯಾಂಕಣಗಳಲ್ಲಿ ಯಾವುದೇ ಒಳ ಅಕ್ಷರವನ್ನೊಳಗೊಳ್ಳದ ಮಹಾತ್ಮಾ ಗಾಂಧಿ ಸರಣಿ 2005ರ, 10 ರೂ ಮೌಲ್ಯವರ್ಗದ ಬ್ಯಾಂಕ್ ನೋಟುಗಳ ನೀಡಿಕೆ**

ಗವರ್ನರ್ ಡಾ॥ ಡಿ. ಸುಬ್ಬಾರಾವ್ ಅವರ ಸಹಿ ಇರುವ, ಮಹಾತ್ಮಾ ಗಾಂಧಿ ಸರಣಿ 2005ರ ನೋಟುಗಳ ಎರಡೂ ಸಂಖ್ಯಾಂಕಣಗಳಲ್ಲಿ ಯಾವುದೇ ಅಕ್ಷರಗಳೊಳಗೊಳ್ಳದ 10 ರೂ. ಮೌಲ್ಯವರ್ಗದ ಬ್ಯಾಂಕ್ ನೋಟುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಶೀಘ್ರದಲ್ಲಿಯೇ ಚಲಾವಣೆಗೆ ಬಿಡಲಿದೆ. ಸಹಿಯ ಬದಲಾವಣೆಯ ಹೊರತಾಗಿ ಈಗ ನೀಡಲಿರುವ ನೋಟುಗಳ ವಿನ್ಯಾಸವು ಈ ಹಿಂದೆ ಏಪ್ರಿಲ್ 27, 2006ರಂದು ಬಿಡುಗಡೆ ಮಾಡಲಾದ ಹೆಚ್ಚುವರಿ / ಹೊಸ ಭದ್ರತಾ ವಿಶೇಷತೆಗಳನ್ನೊಳಗೊಂಡ ಮಹಾತ್ಮಾ ಗಾಂಧಿ ಸರಣಿ 2005ರ ಬ್ಯಾಂಕ್ ನೋಟುಗಳನ್ನೇ ಹೋಲುತ್ತವೆ. ಬ್ಯಾಂಕು ಈ ಹಿಂದೆ ಬಿಡುಗಡೆ ಮಾಡಿದ 10 ರೂ. ಮೌಲ್ಯದ ನೋಟುಗಳು ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ : 2008 – 2009 / 545